

ಕರೆದೊಯ್ಯುವೆ' ಎಂದಿತು.

ಸರಿ.. ಹೋಗೋಣ ಬಾ.. ಎಂದು ಕರಡಿ ಮಂಗಣ್ಣನೊಂದಿಗೆ ಹೊರಟು ನಿಂತಿತು. ಸ್ವಲ್ಪ ದೂರ ಕ್ರಮಿಸಿದ ಬಳಿಕ ಮಂಗಣ್ಣ ದೂರದಿಂದಲೇ ಅಗೋ ಅದೇ ಅವನ ಮನೆ ಎಂದು ತೋರಿಸಿ ಅಲ್ಲಿಯೇ ಇದ್ದ ಮರದ ಮೇಲೆ ಏರಿ ಕುಳಿತಿತು.

ಸರಿ ಬಿಡು ಎನ್ನುತ್ತ ಕರಡಿ ಮೆಲ್ಲಗೆ ಬೇಡನ ಮನೆಯ ಬಳಿ ಬಂದಿತು. ಆಗ ಬೇಡನ ಪುಟ್ಟ ಮಗು ಅಂಗಳದಲ್ಲಿ ಒಂದೇ ಆಡುತ್ತಿತ್ತು. ಸ್ವಲ್ಪ ದೂರದಲ್ಲಿ ಆ ಮಗುವಿನ ತಾಯಿ ಬುಟ್ಟಿ ಹೆಣೆಯುತ್ತ ಕುಳಿತಿದ್ದಳು. ಹತ್ತಿರಕ್ಕೆ ಬಂದ ಕರಡಿ ಆಡುತ್ತಿದ್ದ ಮಗುವನ್ನು ಎತ್ತಿಕೊಂಡು ಹೊರಡಲು ಮುಂದಾದಾಗ ಅದು ಜೋರಾಗಿ ಅಮ್ಮಾ... ಅಮ್ಮಾ... ಎಂದು ಕಿರುಚಲಾರಂಭಿಸಿತು. ಆ ಭಯಂಕರ ದೃಶ್ಯ ಕಣ್ಣಾರೆ ಕಂಡ ಮಗುವಿನ ತಾಯಿ ಗಾಬರಿಯಿಂದ ಎದೆ ಬಡಿದುಕೊಳ್ಳುತ್ತ ಅಯ್ಯೋ.. ನನ್ನ ಮಗುನ್ನ ಕರಡಿ ಹೊತ್ಕೊಂಡು ಹೋಗ್ತಿದೆ ಯಾರಾದರೂ ಸಹಾಯ ಮಾಡಿ ಎಂದು ಒಂದೇ ಸಮ ಬೊಬ್ಬೆ ಹಾಕತೊಡಗಿದಳು. ಅಷ್ಟರಲ್ಲಿ ಮೊಲದ ಮರಿ ಸಮೇತ ಅಲ್ಲಿಗೆ ಬಂದ ಬೇಡ ವಿಷಯ ತಿಳಿದು ಕರಡಿಯ ಬೆನ್ನಟ್ಟಿ ಓಡಲಾರಂಭಿಸಿದ. ಕೆಲವು ನಿಮಿಷಗಳ ಓಟದ ನಂತರ ಒಂದು ಹಲಸಿನ ಮರದ ಎದುರು ತನ್ನ ಮಗುವನ್ನು ಕೂರಿಸಿಕೊಂಡ ಕರಡಿಯನ್ನು ಕಂಡು ಧೈರ್ಯದಿಂದ ಅದರ ಬಳಿ ಹೋಗಿ ಎರಡೂ ಕೈ ಜೋಡಿಸುತ್ತಾ ದಯವಿಟ್ಟು ನನ್ನ ಮಗುವಿಗೆ ಏನೂ ಮಾಡಬೇಡ ಬಿಟ್ಟು ಬಿಡು ಎಂದು ಹೇಳುವಷ್ಟರಲ್ಲಿ ಆತನ ಕಣ್ಣಿನಿಂದ ನೀರು ಸುರಿಯತೊಡಗಿತು. ಆತ ಪಡುತ್ತಿದ್ದ ಸಂಕಟ ಕಂಡ ಕರಡಿ 'ನೋಡಿದೆಯಾ? ನೀನು ಹೇಗೆ ಮಗು ಕಳೆದುಕೊಂಡಿದ್ದಕ್ಕೆ ಸಂಕಟ ಪಡುತ್ತಿದ್ದಿಯ, ಅದೇ ರೀತಿ ನಿನ್ನ ಕೈಯಲ್ಲಿ ಇರುವ ಮೊಲದ ಮರಿಯ ತಾಯಿ ಕೂಡ ಅಷ್ಟೇ ಸಂಕಟ ಪಡುತ್ತಿದ್ದಾಳೆ ಎನ್ನುವುದು ಗೊತ್ತಾ? ನಿನಗೆ ನಿನ್ನ ಮಗು ಬೇಕಿದ್ದರೆ ಮೊದಲು ಆ ಮೊಲದ ಮರಿಯನ್ನು ಇಲ್ಲಿ ಇಡು, ಅಲ್ಲದೆ ಇನ್ನು ಮುಂದೆ ಯಾವ ಕಾರಣಕ್ಕೂ ಪುಟ್ಟ ಪುಟ್ಟ ಪ್ರಾಣಿಗಳಿಗೆ ತೊಂದರೆ ಕೊಡಬೇಡ, ಒಂದು ವೇಳೆ ಪುನಃ ಇಂತಹ ಕೆಲಸಕ್ಕೆ ಕೈ ಹಾಕಿದರೆ ನಾನೇನು ಮಾಡುತ್ತೇನೋ ಗೊತ್ತಿಲ್ಲ ಹುಷಾರ್! ಹೂಂ, ನಿನ್ನ ಮಗುವನ್ನು ಕರೆದುಕೊಂಡು ಹೋಗು' ಎಂದು ಗುಡುಗಿದಾಗ, ಆ ಬೇಡ ಇಲ್ಲ ನಾನು ಇನ್ನು ಮುಂದೆ ಈ ರೀತಿ ಮಾಡಲ್ಲ. ದಯವಿಟ್ಟು ಕ್ಷಮಿಸಿಬಿಡು ಎಂದು ಮೊಲದ ಮರಿಯನ್ನು ಅಲ್ಲಿ ಬಿಟ್ಟು ತನ್ನ ಮಗನನ್ನು ಕರೆದುಕೊಂಡು ಮನೆ ಕಡೆಗೆ ಹೊರಟು ಹೋದ. ಇಷ್ಟೆಲ್ಲ ನೋಡುತ್ತಿದ್ದ ಮಂಗಣ್ಣ ಛಂಗನೆ ಮರದಿಂದ ಹಾರಿ ಬಂದು ಕರಡಿ ಮಾಮ ನಿಂಗೆ ಥ್ಯಾಂಕ್ಸ್ ಎಂದು ಹೇಳಿ ಹಾರಿತು. ■

# ಡ್ರೈವರ್ ಅಣ್ಣ

ಡ್ರೈವರ್ ಅಣ್ಣ ಡ್ರೈವರ್ ಅಣ್ಣ
ಗಾಡಿಬಿಡು
ಬೇಗ ಬೇಗ ಟಿಕೆಟ್ ಕೊಟ್ಟು
ನಡೆದುಬಿಡು

ಹಿಂದೆ ಮುಂದೆ ಎಡಕೆ ಬಲಕೆ
ನೋಡಿಬಿಡು
ಬೆಕ್ಕು ನಾಯಿ ಅಡ್ಡ ಬಂದ್ರೆ
ತಡೆದುಬಿಡು

ನಿದ್ದೆ ಬಂದ್ರೆ ಚಹಾಕ್ಕಾಗಿ
ನಿಲಿಸಿಬಿಡು
ಒಂದು ಗಳಿಗೆ ಸಮಯ ಕಳೆದು
ಹೊರಟುಬಿಡು

ಚಿಲ್ರೆ ಗಿಲ್ರೆ ಕೊಡೋದಿದ್ರೆ
ಕೊಟ್ಟುಬಿಡು
ಹಾರ್ನ್ ಮಾಡಿ ಭರ್ರನೆಂದು
ಬಿಟ್ಟುಬಿಡು

ಅಲ್ಲಿ ಇಲ್ಲಿ ಇಳಿಯುವವರ
ಇಳಿಸಿಬಿಡು
ಮನೆಗೆ ಹೋಗಿ ಆರಾಮಾಗಿ
ಇದ್ದುಬಿಡು! ■





ಕುಂಚ ಪ್ರಪಂಚ



**ಸಚಿನ್ ಟಿ. ಎಸ್.**
4ನೇ ತರಗತಿ,
ಆರ್ಕಿಡ್ ವಿವೇಕಾನಂದ
ಇಂಟರ್ನ್ಯಾಷನಲ್ ಸ್ಕೂಲ್
ಬೆಂಗಳೂರು